ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಶುಕ್ರವಾರ ೬ನೇ ಸೆಪ್ಟೆಂಬರ್ ೧೯೯೧. ಭಾದ್ರಪದ ೧೫, ಶಕ ೧೯೧೩

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೩೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವೆನ್‌ಲಾಕ್ ಮತ್ತು ಲೇಡಿ ಗೋಷನ್ ಆಸ್ಪತ್ರೆ

2536 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ವೆನ್ಲಾಕ್ ಹಾಗೂ ಲೇಡಿ ಗೋಷನ್ ಆಸ್ಪತ್ರೆಗಳಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು?

ಆ) ಮೇಲ್ಕಂಡ ಆಸ್ಪತ್ರೆಗಳಲ್ಲಿರುವ ಹಾಸಿಗೆಗಳು ಅಗತ್ಯಕ್ಕಿಂತ ತೀರ ಕಡಿಮೆ ಪ್ರಮಾಣದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ದಿನದಿಂದ ದಿನಕ್ಕೆ ರೋಗಿಗಳ ಸಂಖ್ಯೆ ಜಾಸ್ತಿಯಾಗಿರುವುದರಿಂದ ಈ ಆಸ್ಪತ್ರೆಗಳಲ್ಲಿ ಹೆಚ್ಚಿಗೆ ಹಾಸಿಗೆಗಳಿಗೆ ವಿಪ್ಪಾಡು ಮಾಡಲಾಗುವುದೆ?

ಈ) ಈ ಆಸ್ಪತ್ರೆಗಳ ಅಭಿವೃದ್ಧಿಯನ್ನು ತ್ವರಿತಮಾಡಲಾಗುವುದೇ, ಈ ಬಗ್ಗೆ ಮನವಿಗಳೇನಾದರೂ ಬಂದಿದೆಯೇ? ಬಂದಿದ್ದಲ್ಲಿ ಅವುಗಳನ್ನು ಯಾವಾಗ ಈಡೇರಿಸಲಾಗುವುದು.

ಉ) ಈ ಆಸ್ಪತ್ರೆಗಳ ಅಭಿವೃದ್ಧಿಗೊಳಿಸಲು ಅಗತ್ಯವಿರುವ ಸೌಲಭ್ಯಗಳನ್ನು ತ್ವರಿತವಾಗಿ ಒದಗಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 1) ವೆನ್‌ಲಾಕ್ ಆಸ್ಪತ್ರೆ ಮಂಗಳೂರು : 675

2) ಲೇಡಿ ಗೋಷನ್ ಆಸ್ಪತ್ರೆ, ಮಂಗಳೂರು : 260

ಆ) ಇಲ್ಲ.

ಇ) ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಈ) ಯಾವುದೇ ಮನವಿಗಳು ಬಂದಿರುವುದಿಲ್ಲ.

ಉ) ಆರ್ಥಿಕ ಅನುಕೂಲತೆಯನ್ನು ನೋಡಿಕೊಂಡು ಅಭಿವೃದ್ಧಿ ಪಡಿಸುವ ಬಗ್ಗೆ ಕ್ರಮಕ್ಕೆಗೊಳ್ಳಲಾಗುವುದು.

ಶ್ರೀ ಕೆ. ಸೋಮಪ್ಪ ಸುವರ್ಣ (ಶ್ರೀ ಬಿ.ಎಂ. ಇದಿನಬ್ಬ ಅವರ ಪರವಾಗಿ): ಮಾನ್ಯ ಅಧ್ಯಕ್ಷರೇ. ನಮ್ಮ ಜಿಲ್ಲೆಯಲ್ಲಿ ವೆನ್‌ಲಾಕ್ ಆಸ್ಪತ್ರೆಯು ಒಂದು ಉತ್ತಮವಾದ ಸ್ಥಳದಲ್ಲಿದ್ದು ಅನೇಕ ರೋಗಿಗಳನ್ನು ಆಕರ್ಷಿಸುವಂತಹ, ಅವರಿಗೆ ಶುಶ್ರೂಷೆಯನ್ನು ಕೊಡಲು..

ಅಧ್ಯಕ್ಷರು : ಆಸ್ಪತ್ರೆಗಳು ರೋಗಿಗಳನ್ನು ಆಕರ್ಷಿಸುತ್ತವೆಯೇ?

ಶ್ರೀ ಕೆ. ಸೋಮಪ್ಪ ಸುವರ್ಣ : ರೋಗಿಗಳ ಕಾಯಿಲೆಯನ್ನು ಗುಣಪಡಿಸುವಂತಹ ವಿಶಿಷ್ಟ ಅನುಕೂಲತೆಗಳಿರುವ ಕಾರಣ, ದೂರದೂರದ ರೋಗಿಗಳು ಸಹ ಅಲ್ಲಿಗೆ ಬರುವಂತಹ ಒಂದು ಸಂದರ್ಭ ಒದಗಿದೆ, ಆದುದರಿಂದ ಆ ಶಬ್ದವನ್ನು ನಾನು ಉಪಯೋಗಿಸಿದೆ. ಈ ಆಸ್ಪತ್ರೆಗೆ ಕೆ.ಎಂ.ಸಿ.ಯ ಡಾಕ್ಟರುಗಳು ಬಂದು ತಮ್ಮ ಅನುಭವವನ್ನು ಹೆಚ್ಚಿಸಿಕೊಳ್ಳುವಂತಹ ಅವಕಾಶವನ್ನು ಸಹ ನಮ್ಮ ಸರ್ಕಾರ ಕಲ್ಪಿಸಿಕೊಟ್ಟಿದೆ. ಆದರೆ ಈಗ ನಾವು ಆ ಆಸ್ಪತ್ರೆಯನ್ನು ಪರಿಶೀಲಿಸಿದಾಗ ಅಲ್ಲಿ ಅನೇಕ ಮಂದಿ ಹೊರರೋಗಿಗಳು ಬಂದಿದ್ರೂ ಸಹ ಅವರಿಗೆ ಬೇಕಾದಂತಹ ಚಿಕಿತ್ಸೆ ಮಾಡುವ ಸೌಲಭ್ಯಗಳು ಅಲ್ಲಿ ಕೊರತೆಯಿಂದ ಕೂಡಿದೆ. ಇನ್ನು ಒಳರೋಗಿಗಳು ಸಾಕಷ್ಟು ಹಾಸಿಗೆಗಳು ಇಲ್ಲದೆ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ನಮ್ಮ ಜಿಲ್ಲೆಯಿಂದಲೇ ಅನೇಕ ಆರೋಗ್ಯ ಮಂತ್ರಿಗಳು ಇದ್ದರೂ ಅದಕ್ಕೆ ಚಿಕಿತ್ಸೆ ಮಾಡಬೇಕೆಂದು ಪ್ರಯತ್ನ ಪಟ್ಟರು ಆ ವೆನ್‌ಲಾಕ್ ಮತ್ತು ಲೇಡಿ ಗೋಷನ್ ಆಸ್ಪತ್ರೆಯನ್ನು ಉತ್ತಮಪಡಿಸಬೇಕೆಂದು ಬಹಳ ಪ್ರಯತ್ನ ಪಟ್ಟರು ಆದರೆ ಅದು ಕನಸಾಗಿಯೇ ಉಳಿದಿದೆ. ಈಗ ಆರ್ಥಿಕ ಸ್ಥಿತಿ ಅನುಕೂಲಕರವಾಗಿಲ್ಲವೆಂದು ನಮ್ಮ ಮಂತ್ರಿಗಳು ತಿಳಿಸಿರುತ್ತಾರೆ. ಆದ್ದರಿಂದ ಈ ಆಸ್ಪತ್ರೆಯಲ್ಲಿ ಅನುಭವವನ್ನು, ತರಬೇತಿಯನ್ನು ಪಡೆಯಲು ಬರುವಂತಹ ಕೆ.ಎಂ.ಸಿಯವರು ಹಣವನ್ನು ಕೊಡುತ್ತಿದ್ದಾರೆ. ಆ ಹಣವನ್ನಾದರೂ ಉಪಯೋಗಿಸಿ ಈ ಆಸ್ಪತ್ರೆಯನ್ನು ಉತ್ತಮಮಟ್ಟಕ್ಕೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ, ಈಗ ರೋಗಿಗಳಿಗೆ ಅಲ್ಲಿ ನಿಜವಾದ ಚಿಕಿತ್ಸೆ ಸಿಗುವುದಿಲ್ಲ. ಆದ್ದರಿಂದ ಹೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸೋಮಪ್ಪ ಸುವರ್ಣರವರು ಹೇಳಿದ ಹಾಗೆ ಈ ಆಸ್ಪತ್ರೆಯಲ್ಲಿ ಹೊರರೋಗಿಗಳ ಸಂಖ್ಯೆ ಬಹಳ ಜಾಸ್ತಿಯಾಗಿದೆ. ಆ ಹೊರರೋಗಿಗಳ ಸಂಖ್ಯೆಗೆ ಹೋಲಿಕೆ ಮಾಡಿದರೆ ಇರತಕ್ಕಂಥ ಹಾಸಿಗೆಗಳು ಕಡಿಮೆ ಅಂದರೆ 675 ಹಾಸಿಗೆಗಳು ಇರತಕ್ಕಂಥದ್ದು ಇವತ್ತಿನ ಪ್ರಸ್ತುತ ಪರಿಸ್ಥಿತಿಯಲ್ಲಿ ವೆನ್‌ಲಾಕ್ ಆಸ್ಪತ್ರೆ ಸ್ವಲ್ಪ ಮಟ್ಟಿಗೆ ಸವಲತ್ತುಗಳನ್ನು ಹೊಂದಿರತಕ್ಕಂಥದ್ದು ಎಂದು ನನ್ನ ವೈಕಕ್ತಿಕ ಭಾವನೆ. ಆದರೂ ಕೂಡ ರೋಗಿಗಳ ಸಂಖ್ಯೆ ಅಥವಾ ಒತ್ತಡ ಜಾಸ್ತಿ ಇರುವುದರಿಂದ ಅಲ್ಲಿಗೆ ಹೆಚ್ಚು ಸವಲತ್ತುಗಳನ್ನು ಮಾಡಿಕೊಡಬೇಕಾಗಿರತಕ್ಕಂಥದ್ದು ಸರ್ಕಾರದ ಜವಾಬ್ದಾರಿಯೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಸ್ವಲ್ಪ ಆರ್ಥಿಕ ಅಡೆತಡೆಗಳಿಂದ ಅವಕಾಶವಾಗಿಲ್ಲ. ಈಗ ಕೆ.ಎಂ.ಸಿ. ಯವರು ಕಸ್ತೂರಿಬಾ ಮೆಡಿಕಲ್ ಕಾಲೇಜಿನವರು ಈ ಒಂದು ಆಸ್ಪತ್ರೆಯನ್ನು ಕ್ಲಿನಿಕಲ್ ಫೆಸಿಲಿಟೀಸ್‌ಗಾಗಿ ಬಳಸಿಕೊಳ್ಳುತ್ತಿದ್ದಾರೆ. ಅವರಿಂದ ಸುಮಾರು 52 ಲಕ್ಷ ರೂಪಾಯಿಗಳು ಕಳೆದ 6-7 ವರ್ಷಗಳಿಂದ ಬಾಕಿಯಿದೆ. ಈ ಹಣವನ್ನು ಈ ವರ್ಷ ಅಂದರೆ 15 ದಿವಸದೊಳಗಾಗಿ ಸರ್ಕಾರಕ್ಕೆ ತುಂಬಬೇಕೆಂದು ನಾವು ಈಗಾಗಲೇ ಅವರಿಗೆ ನೋಟೀಸನ್ನು ಕೂಡ ಕಳುಹಿಸಿದ್ದೇವೆ. ಆ ಹಣವನ್ನು ರೆಕವರಿ ಮಾಡುವುದರ ಮೂಲಕ ಬರತಕ್ಕ ಪೂರಾ ಹಣವನ್ನು ಅಲ್ಲಿಯೇ ವಿನಿಯೋಗಿಸಿ ಇದನ್ನು ಅತ್ಯುತ್ತಮ ಆಸ್ಪತ್ರೆಯನ್ನಾಗಿ ಮಾಡತಕ್ಕಂಥಾದ್ದಕ್ಕೆ ಕ್ರಮವನ್ನು ಕೈಗೊಳ್ಳುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.